# ಕಮಲಾವತಾರಂ



ಕಮಲಹಾಸನ್‌ಗೆ ವಿವಾದಗಳು ಹೊಸತಲ್ಲ. ಹಿಂದೆ ಅವರ 'ದಶಾವತಾರಂ' ಸಿನಿಮಾ ಬಿಡುಗಡೆಯ ಸಂದರ್ಭದಲ್ಲೂ ವಿವಾದ ಭುಗಿಲೆದ್ದಿತ್ತು. ಈಗ 'ಉತ್ತಮ ವಿಲ್ಲನ್' ಚಿತ್ರದ ಬಿಡುಗಡೆಗೆ ಮುನ್ನವೂ ವಿವಾದ ಎದ್ದಿದೆ. ಈ ಸಲವೂ ಧರ್ಮಾಭಿಮಾನಿಗಳದ್ದೇ ಟೀಕೆ. ಕಮಲಹಾಸನ್ ಚಿತ್ರದಲ್ಲಿ ತಮ್ಮ ಧರ್ಮಶ್ರದ್ಧೆಯನ್ನು ನೋಯಿಸುವ ಅಂಶಗಳಿವೆ ಎನ್ನುವುದು ಚೆನ್ನೈನ ಕೆಲವು ದೈವಭಕ್ತರ ಆಕ್ಷೇಪ. ದೈವಭಕ್ತರಿಗೂ ಕಮಲ್‌ಗೂ ಹಿಂದಿನಿಂದಲೂ ಆಗಿಬರೋದಿಲ್ಲ. ಕಳೆದ ವರ್ಷ ಒಮ್ಮೆ ಸ್ಥಳೀಯ ಮಠವೊಂದಕ್ಕೆ ಭೇಟಿ ಕೊಟ್ಟದ್ದು ಬಿಟ್ಟರೆ, ಅವರು ಬಹುತೇಕ ನಾಸ್ತಿಕರೇ. ತಮ್ಮ ಚಿತ್ರಗಳಲ್ಲಿ ದೇವ–ದೇವತೆಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟೀಕೆಗಳನ್ನು ಮಾಡುವ ಬಗ್ಗೆ ಕಮಲ್ ಅಂಜಿದವರೂ ಅಲ್ಲ. ಈಗ 'ಉತ್ತಮ ವಿಲ್ಲನ್' ಚಿತ್ರದ ಹಿರಣ್ಯಕಶಿಪು ನಾಟಕ ಪ್ರಸಂಗಕ್ಕೆ ಸಂಬಂಧಿಸಿ, ಭಕ್ತರು ಸಿಟ್ಟಿಗೆದ್ದಿದ್ದಾರೆ. ಅದಕ್ಕೆ ಪ್ರತಿಯಾಗಿ ಧರ್ಮರಕ್ಷಕರ ವಿರುದ್ಧ ಗುಟುರು ಹಾಕಿರುವ ಕಮಲ್, 'ಬ್ರಾಹ್ಮಣರೂ ಗೋಮಾಂಸ ತಿನ್ನುತ್ತಿದ್ದರು. ಗೋಮಾಂಸವನ್ನು ಮಾತ್ರ ಏಕೆ ನಿಷೇಧಿಸಬೇಕು? ಮಾಡುವುದಿದ್ದರೆ ಎಲ್ಲ ಪ್ರಾಣಿಗಳ ಮಾಂಸ ಭಕ್ಷಣೆಯನ್ನೂ ನಿಷೇಧಿಸಿ' ಎಂದು ತಿವಿದಿದ್ದಾರೆ. ಈ ಟೀಕೆ– ಪ್ರತಿಟೀಕೆಗಳಿಂದ ಸ್ವಲ್ಪ ಮಟ್ಟಿಗೆ ಕಮಲ್ ಹೊಸ ಚಿತ್ರಕ್ಕೆ ಪ್ರಚಾರ ಸಿಗುವುದು ಬಿಟ್ಟರೆ ಬೇರೇನೂ ಲಾಭ ಇದ್ದಂತಿಲ್ಲ.

ಕಮಲ್ ಹೊಸ ಸಿನಿಮಾ ಎಂದರೆ ಸಾರ್ವಜನಿಕರಲ್ಲೂ ದೊಡ್ಡದೊಂದು ನಿರೀಕ್ಷೆ ಇರುತ್ತದೆ. ಭಾರತೀಯ ಸಿನಿಮಾ ರಂಗದಲ್ಲೇ ವಿಭಿನ್ನ ಪ್ರಯೋಗಗಳನ್ನು ಮಾಡುವವರ ಪೈಕಿ ಕಮಲ್ ಮುಂಚೂಣಿಯಲ್ಲಿದ್ದಾರೆ. ಸುಮಾರು 140 ಚಿತ್ರಗಳಲ್ಲಿ ನಟಿಸಿರುವ ಕಮಲ್‌ಹಾಸನ್‌ರ, ಅತ್ಯುತ್ತಮ ಚಿತ್ರಗಳನ್ನು ಹೆಸರಿಸಿ ಎಂದರೆ, ಆ ಪಟ್ಟಿಯನ್ನು ಕಷ್ಟಪಟ್ಟು 50ಕ್ಕೆ ತಂದು ನಿಲ್ಲಿಸಬಹುದು. ಕಮಲ್ ಕೇವಲ ನಟ ಮಾತ್ರವಲ್ಲ, ನಿರ್ದೇಶಕ, ಚಿತ್ರಕಥೆಗಾರ, ಹಿನ್ನೆಲೆ ಗಾಯಕ, ಕೊರಿಯೊಗ್ರಾಫರ್, ಮೇಕಪ್‌ಮ್ಯಾನ್, ಗೀತ ರಚನೆಕಾರ ಎಲ್ಲವೂ ಹೌದು. 4ರ ಎಳವೆಯಲ್ಲೇ 'ಕಳತ್ತೂರು ಕಣ್ಣಮ್ಮ' ಚಿತ್ರದಲ್ಲಿ ಬಾಲನಟನಾಗಿ ಅತ್ಯುತ್ತಮ ನಟನೆಗೆ 'ರಾಷ್ಟ್ರಪತಿ ಪದಕ' ಪಡೆದವರು ಕಮಲ್. ವಕೀಲರಾಗಿದ್ದ ಅವರ ತಂದೆಯ ಆಸಕ್ತಿಯಿಂದಾಗಿ ಬಾಲ್ಯದಲ್ಲೇ ಟಿಕೆಎಸ್ ನಾಟಕ ಸಭಾದಲ್ಲಿ ನಟನಾ ತರಬೇತಿಯೂ ಸಿಕ್ಕಿತು. ಸಿನಿಮಾ ಕುರಿತ ಅವರ ನಿಷ್ಠೆ ಮತ್ತು ಜ್ಞಾನದ ಬಗ್ಗೆ ಎರಡನೇ ಮಾತೇ ಇಲ್ಲ. 'ಅಪೂರ್ವ ರಾಗಂಗಳ್' ಎನ್ನುವ 70ರ ದಶಕದ ಆರಂಭದ ಚಿತ್ರದಲ್ಲೂ ಪಾತ್ರದ ಸಲುವಾಗಿ ತಬಲಾ ನುಡಿಸುವುದನ್ನು ಕಲಿತವರು ಕಮಲ್. ದ್ವಿಪಾತ್ರ, ತ್ರಿಪಾತ್ರ ಮತ್ತು 'ಅವ್ವೈ ಷಣ್ಮುಖಿ'ಯಂತಹ ಅಜ್ಜಿಯ ಪಾತ್ರ, ದಶಾವತಾರಂನ ಹತ್ತು ಪಾತ್ರಗಳು– ಹೀಗೆ ನಟನೆಯಲ್ಲಿ ಕಮಲ್ ಮಾಡದೆ ಉಳಿದ ಸಾಹಸಗಳಿಲ್ಲ. ಚಿತ್ರರಂಗಕ್ಕೆ ಬಂದ ಆರಂಭದಲ್ಲಿ ಮೇಕಪ್‌ಮ್ಯಾನ್ ಕೂಡಾ ಆಗಿದ್ದ ಕಮಲ್, ತಮಿಳಿನ ಪ್ರಸಿದ್ಧ ನಟರಾದ ಎಂಜಿಆರ್, ಶಿವಾಜಿ ಗಣೇಶನ್ ಮತ್ತು ನಟಿ ಜಯಲಲಿತಾ ಅವರಿಗೂ ಮೇಕಪ್ ಮಾಡಿದ್ದಿದೆ! ಕೆಲವು ವರ್ಷಗಳ ಹಿಂದೆ ಅಮೆರಿಕದಲ್ಲಿ ಮೇಕಪ್ ಕಲೆಯ ವಿಶೇಷ ಕೋರ್ಸ್ ಕೂಡಾ ಮಾಡಿದ್ದಾರೆ. ಇವೆಲ್ಲವೂ ತಮ್ಮ ಸಿನಿಮಾಗಳ ಗುಣಮಟ್ಟದಲ್ಲಿ ಪರಿಪೂರ್ಣತೆ ಸಾಧಿಸಲು ಅವರಿಗೆ ನೆರವಾಗಿವೆ. ಕಮಲ್ ಬಗ್ಗೆ ಇರುವ ದೊಡ್ಡ ಟೀಕೆಯೆಂದರೆ, ಅವರ ಪರಿಪೂರ್ಣತೆಯ ಹುಚ್ಚಿನಿಂದಾಗಿ ಅನೇಕ ಚಿತ್ರಗಳ ಬಜೆಟ್ ದುಪ್ಪಟ್ಟು ಹೆಚ್ಚುತ್ತದೆ ಎನ್ನುವುದು. ಪ್ರೇಕ್ಷಕರಿಗಂತೂ ಅದರಿಂದ ಲಾಭವೇ ಆಗಿದೆ. ಈ ಪರಿಪೂರ್ಣತೆಯಿಂದಾಗಿಯೇ ಕಮಲ್ ವಿಶ್ವದಾದ್ಯಂತ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದಾರೆ.

ಅಭಿನಯಕ್ಕಾಗಿ ನಾಲ್ಕು ರಾಷ್ಟ್ರಪ್ರಶಸ್ತಿ ಮತ್ತು 19 ಫಿಲಂಫೇರ್ ಪ್ರಶಸ್ತಿಗಳನ್ನು ಗೆದ್ದ ಅಪರೂಪದ ನಟ ಕಮಲ್. ಭಾರತದಿಂದ ಆಸ್ಕರ್ ನಾಮಕರಣಗೊಂಡ ಅತ್ಯಧಿಕ ಚಿತ್ರಗಳಲ್ಲಿ ನಟಿಸಿದಾತ ಎನ್ನುವ ಹೆಮ್ಮೆಯೂ ಅವರದ್ದು. ಕಮಲ್ ಅಭಿನಯಿಸಿದ ಒಟ್ಟು 7 ಚಿತ್ರಗಳು ಈವರೆಗೆ ಆಸ್ಕರ್ ಪ್ರಶಸ್ತಿಗೆ ವಿದೇಶೀ ಚಿತ್ರಗಳ ವಿಭಾಗದಲ್ಲಿ ಭಾರತದಿಂದ ನಾಮಕರಣಗೊಂಡಿವೆ. ಮರೋಚರಿತ್ರ, ಮೂನ್ರಾಂಪಿರೈ, ನಾಯಗನ್, ಇಂಡಿಯನ್ ಮುಂತಾದ ಚಿತ್ರಗಳಲ್ಲಿ ಅವರ ಅಭಿನಯವನ್ನು ಮರೆಯುವುದು ಕಷ್ಟ. ಪದ್ಮಶ್ರೀ, ಪದ್ಮಭೂಷಣ ಮುಂತಾಗಿ ನೂರಾರು ಪ್ರಶಸ್ತಿಗಳೂ ಅವರನ್ನು ಅರಸಿಕೊಂಡು ಬಂದಿವೆ. ಇತ್ತೀಚೆಗೆ ಸೂಪರ್‌ಹಿಟ್ ಆದ ಅಮೀರ್‌ಖಾನ್ ಅಭಿನಯದ 'ಪಿಕೆ' ಚಿತ್ರವನ್ನು ಕಮಲ್ ತಮಿಳಿನಲ್ಲಿ ಮಾಡುತ್ತಾರೆಂಬ ಸುದ್ದಿ ಇದೆ. 'ಬರೀ ಆರಂಭಿಕ ಮಾತುಕತೆ ಆಗಿದೆ. ಇನ್ನೂ ನಿರ್ಧಾರ ಆಗಿಲ್ಲ. ಆ ಪಾತ್ರವನ್ನು ಯಾರು ಬೇಕಾದರೂ ಮಾಡಬಹುದು, ಅಷ್ಟು ಚೆನ್ನಾಗಿದೆ' ಎಂದಿದ್ದಾರೆ ಕಮಲ್.

ಅಭಿನಯದ ಮಟ್ಟಿಗೆ ಪರ್ಫೆಕ್ಷನಿಸ್ಟ್ ಆಗಿರುವ ಕಮಲ್, ವೈಯಕ್ತಿಕ ಜೀವನದಲ್ಲಿ ಮಾತ್ರ 'ತೀರಾ ಅಧ್ವಾನ' ಎನ್ನುವ ಮಾತುಗಳಿವೆ. ನಟನೊಬ್ಬನ ವೈಯಕ್ತಿಕ ಜೀವನದ ಬಗ್ಗೆ ಹೀಗೆ ಸಾರಾಸಗಟು ಶಬ್ದಗಳನ್ನು ಬಳಸುವುದು ಸರಿಯಲ್ಲ ಎನ್ನುವುದು ನಿಜ. ಸಂದರ್ಶನಕ್ಕೆ ಬಂದ ನೃತ್ಯಪಟು ವಾಣಿ ಗಣಪತಿಯವರನ್ನು ಮದುವೆಯಾಗಿ ಹತ್ತು ವರ್ಷ (1978–88) ಸಂಸಾರ ನಡೆಸಿದ ಕಮಲ್, ಬಳಿಕ ಬಾಲಿವುಡ್ ನಟಿ ಸಾರಿಕಾ ಜತೆ ಮದುವೆಯಾಗಿ 16 ವರ್ಷ (1988–2004) ಸಂಸಾರ ನಡೆಸಿದರು. ಸಿಮ್ರಾನ್ ಎನ್ನುವ ಇನ್ನೊಬ್ಬ ನಟಿಯ ಜತೆಗಿನ ಸಂಬಂಧದಿಂದಾಗಿ ಸಾರಿಕಾ ಜತೆಗಿನ ಸಂಸಾರ ಮುರಿದುಬಿತ್ತು. ಈಗ ನಟಿ ಗೌತಮಿಯವರ ಜತೆ ವಾಸಿಸುತ್ತಿದ್ದಾರೆ. ಸಾರಿಕಾರ ಇಬ್ಬರು ಹೆಣ್ಣುಮಕ್ಕಳೂ ಅಪ್ಪನ ಮನೆಯಲ್ಲೇ ಇದ್ದಾರೆ. ವೈಯಕ್ತಿಕ ಗೊಂದಲಗಳು ಏನೇ ಇರಲಿ, ಕಮಲ್ ಅಭಿಮಾನಿಗಳ ಸಂಖ್ಯೆ ಬೆಳೆಯುತ್ತಲೇ ಇದೆ. ಉತ್ತಮ ವಿಲ್ಲನ್ ಬಳಿಕ 'ವಿಶ್ವರೂಪಂ–2' ಕೂಡಾ ಬಿಡುಗಡೆಗೆ ಸಿದ್ಧವಾಗಿದೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65